ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 27.03.2024.

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಬಿ.ಎ.ಡಿ. ವಕೀಲರಿಂದಃ**

ನಾನು ನಾಗಮ್ಮ ಅಲ್ಲ ಎಂದರೆ ಸರಿಯಲ್ಲ. ನನ್ನ ಆಧಾರ ಗುರುತಿನ ಚೀಟಿ ನಂಬರ ಮತ್ತು ಚುನಾವಣಾ ಗುರುತಿನ ಚೀಟಿ ನಂಬರ ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿಲ್ಲ ಎಂದರೆ ಸರಿ. ನಾನು 5 ನೇ ತರಗತಿಯವರೆಗೆ ಶಿಕ್ಷಣ ಪೂರೈಸಿರುತ್ತೇನೆ. ನನಗೆ ಆಂಗ್ಲ ಓದಲು ಬರೆಯಲು ಬರುವುದಿಲ್ಲ ಹಾಗೂ ಸಹಿ ಕನ್ನಡದಲ್ಲಿ ಮಾಡುತ್ತೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ತವರು ಮನೆ ಮಾಡ್ಯಾಳ ಗ್ರಾಮ ಇರುತ್ತದೆ. ನನ್ನ ತಂದೆ-ತಾಯಿ ಜೀವಂತ ಇಲ್ಲ, ಆದರೆ ನನ್ನ ತಮ್ಮ ಜೀವಂತ ಇರುತ್ತಾನೆ.

ನನ್ನ ಮದುವೆಯಾಗಿ ಸುಮಾರು 25 ವರ್ಷವಾಗಿರುತ್ತದೆ ಹಾಗೂ ನನ್ನನ್ನು ಕಲಬುರಗಿಗೆ ಕೊಟ್ಟಿರುತ್ತಾರೆ. ನನ್ನ ಮದುವೆಯಾಗಿನಿಂದ ನನಗೂ ಮತ್ತು ನನ್ನ ಅಕ್ಕಳಾದ 4 ನೇ ವಾದಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಎಂದೂ 4 ನೇ ವಾದಿಗೆ ಊರಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಸುಮಾರು 4-5 ತಿಂಗಳ ಹಿಂದೆ ಬೊಮ್ಮನಳ್ಳಿ ಗ್ರಾಮಕ್ಕೆ ಹೋಗಿದ್ದೆ. ನಾನು ಹೋದಾಗ 4 ನೇ ವಾದಿ ಕುಟುಂಬ ಇತ್ತು. ನನ್ನ ಅಕ್ಕನ ದೊಡ್ಡ ಮಗ 1 ನೇ ವಾದಿ ಬೆಂಗಳೂರಿನಲ್ಲಿ ಕೆಲಸಕ್ಕೆ ಇರುತ್ತಾನೆ. 2 ನೇ ಮಗ ಅಂದರೆ 2 ನೇ ವಾದಿ ಕಲಬುರಗಿಯಲ್ಲಿ ನೌಕರಿ ಮಾಡಿಕೊಂಡು ಇರುತ್ತಾನೆ. ನನ್ನ ಅಕ್ಕ 4 ನೇ ವಾದಿ ಈಗ ಕಲಬುರಗಿಯಲ್ಲಿ ಇರುತ್ತಾಳೆ. ಸಾಕ್ಷಿ ಮುಂದುವರೆದು ಆವಾಗ-ಆವಾಗ ಬೊಮ್ಮನಳ್ಳಿ ಗ್ರಾಮಕ್ಕೆ ಹೋಗಿ ಬಂದು ಮಾಡುತ್ತಾರೆ ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿ ಕುಟುಂಬ ಸುಮಾರು ವರ್ಷಗಳಿಂದ ಬೊಮ್ಮನಲ್ಲಿ ಗ್ರಾಮದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸರ್ವೆ ನಂಬರ ಮತ್ತು ಚತುರ ಸೀಮಾ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ತುಂಬಾ ಮದ್ಯಪಾನ ಮಾಡುತ್ತಾನೆ ಎಂದು 4 ನೇ ವಾದಿ ಎಂದೂ ಪೊಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಿಲ್ಲ. 1 ನೇ ಪ್ರತಿವಾದಿ ತುಂಬಾ ಮದ್ಯಪಾನ ಮಾಡುತ್ತಾನೆ ಎಂದು ಆತನ ಜೊತೆ ಯಾವುದೇ ವ್ಯವಹಾರ ಮಾಡಬಾರದು ಎಂದು, ಪತ್ರಿಕೆ ಪ್ರಕಟಣೆ ಕೊಟ್ಟಿದ್ದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ತುಂಬಾ ಮದ್ಯಪಾನ ಮಾಡುತ್ತಾನೆ ಎಂದು ನನಗೆ ನನ್ನ ಅಕ್ಕಳಾದ 4 ನೇ ವಾದಿ ಎಂದೂ ಕೂಡಾ ಹೇಳಿರುವುದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಇತ್ತಿಚಿಗೆ ಕುಡಿಯಲು ಪ್ರಾರಂಭೀಸಿತ್ತಾರೆ ಎಂದು ನುಡಿಯುತ್ತಾರೆ.

4 ನೇ ವಾದಿ ನನ್ನ ಅಕ್ಕ ಆಗಿರುವ ಕಾರಣ ಅವಳ ಕೋರಿಕೆ ಮೇರೆಗೆ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ. ಈ ದಾವೆಯನ್ನು ಯಾರು, ಯಾರ ಮೇಲೆ ಮಾಡಿರುತ್ತಾರೆ ಹಾಗೂ ದಾವೆಯ ವಿಷಯದ ಬಗ್ಗೆ ನಾನು ಚೌಕಾಶಿ ಮಾಡಿರುವುದಿಲ್ಲ. 1 ಮತ್ತು 2 ನೇ ವಾದಿಯರ ಸಂಭಳ ಎಷ್ಟು ಇದೆ ಎಂದು ನಾನು ದಾಖಲೆಯನ್ನು ನೋಡಿಲ್ಲ. ದಾವಾ ಸ್ವತ್ತಿನ ಉತ್ಪನ್ನ ಎಷ್ಟು ಬರುತ್ತದೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿರುವ ಕೊಳವೆ ಬಾವಿಯನ್ನು ಯಾರು ಹಾಕಿಸಿರುತ್ತಾರೆ ಎಂದು ಗೊತ್ತಿಲ್ಲ ಎಂದರೆ, ಸಾಕ್ಷಿ ಹಿರಿಯರು ಹಾಕಿಸಿರುತ್ತಾರೆ ಎಂದು ನುಡಿಯುತ್ತಾರೆ. ಯಾವಾಗ ಹಾಕಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ನನಗೆ ದಾವೆಯ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ಕೂಡಾ 4 ನೇ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಕುಡಿತದ ಚಟಕ್ಕೆ ಬಲಿಯಾಗಿರುತ್ತಾನೆ ಎಂದು ಹೇಳುವ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. 1 ಮತ್ತು 4 ನೇ ವಾದಿ ಕೂಡಿಯೇ ಇರುತ್ತಾರೆ ಎಂದರೆ ಸರಿ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**